ಮಕ್ಕಳಿಗಾಗಿ ಬೈಬಲ್
ಅರ್ಪಿಸುವ

# ನದಿಯಿಂದ ರಾಜಕುಮಾರನು



ಬರಹಗಾರರು: Edward Hughes

ಚಿತ್ರಲೇಖಕರು: M. Maillot; Lazarus

ಅಳವಡಿಸುವವರು: M. Maillot; Sarah S; Alastair Paterson

ಪದ್ಮಾ ಸೈಲೇಸ್: Vinay Shirol

ತಯಾರಕರು: Bible for Children
www.M1914.org

©2021 Bible for Children, Inc.
ಅನುಮತಿ: ಈ ಕಥೆಯನ್ನು ಉಪಯೋಗಿಸುವದಕ್ಕೆ ಮತ್ತು ಮುದ್ರಣಹಾಕುವದಕ್ಕೆ ನಿಮಗೆ ಅನುಮತಿ ಇರುವದು. ಆದರೆ, ಇದನ್ನು ನೀವು ಯಾವ ಕಾರಣಕ್ಕಾಗಿಯೂ ಮಾರಾಟಮಾಡಬಾರದು.

ಪ್ರಧಾನ ಮಂತ್ರಿಯಾದ ಯೋಸೆಫನು ಸತ್ತ ನಂತರ ಕುಟುಂಬದ ದುಃಖದಲ್ಲಿ ಐಗುಪ್ತದ ಜನರು ಸಹ ಭಾಗಿಯಾದರು.

ದೇವರು ಇಬ್ರೀಯನಾದ ಯೋಸೆಫನ ಮುಖಾಂತರ ದೇಶವನ್ನು ಬರಗಾಲದಿಂದ ತಪ್ಪಿಸಿದನು.





ಆತನು ಒಬ್ಬ ಜ್ಞಾನವಂತ
ಮತ್ತು ಆತ್ಮೀಯ
ಆಡಳಿತಗಾರನಾಗಿದ್ದನು

ಆದರೆ ಈಗ
ಅವನೆ
ಇಲ್ಲ.

ಸೂಮಾರು ಮುನ್ನೂರು ವರ್ಷಗಳು ಗತಿಸಿದ ನಂತರ
ಯೋಸೆಫನ ಜನರು ಐಗುಪ್ತದಲ್ಲಿ
ಬಲಾಢ್ಯರಾಗತೊಡಗಿದರು.



ಹೊಸದಾಗಿ ಬಂದ ಇನ್ನೊಬ್ಬ ಫರೋಹನನು,
ಇಬ್ರೀಯರು ಆತನ ಮೇಲೆ ತಿರುಗಬಹುದೆಂದು ತಿಳಿದು
ಅವರನ್ನು ಗುಲಾಮರನ್ನಾಗಿ ಮಾಡಿಕೊಂಡನು.



ಫರೋಹನನು ಅವರನ್ನು ಕ್ರೂರವಾಗಿ ಹಿಂಸಿಸಿದನು. ದೊಡ್ಡ ಪಟ್ಟಣಗಳನ್ನು ಕಟ್ಟಲು ಅವರನ್ನು ಒತ್ತಾಯಿಸಿದನು. ಆತನು ಎಷ್ಟೋ ಹಿಂಸಿಸಿದರೂ, ಕಷ್ಟಕೊಟ್ಟರೂ, ಇಬ್ರೀಯರು ಸಂಖ್ಯೇಯಲ್ಲಿ ಹೇಚ್ಚುತ್ತಾ ಬಂದರು.



ಒಂದು ದಿನ ಬಯಂಕರವಾದ ಆಜ್ಞೇಯು ಫರೋಹನನಿಂದ ಹೋರಬಂದಿತು. ಅದೆನೆಂದರೇ "ಎಲ್ಲಾ ಇಬ್ರೀಯರ ಗಂಡು ಮಕ್ಕಳನ್ನು ನೈಲ್ ನದಿಯಲ್ಲಿ ಬೀಸಾಡಬೇಕು" ಎಂಬುದಾಗಿ.



ಕ್ರೂರಿಯಾದ ಫರೋಹನನು ಇಬ್ರೀಯ ಜನರನ್ನು ಕಡಿಮೆ ಮಾಡುವುದಕ್ಕೋಸ್ಕರ ಮಕ್ಕಳನ್ನು ಸಹ ಕೊಂದುಹಾಕಿದನು.



"ನಾವೀಗೆ ಏನು ಮಾಡೋಣ" ಎಂದು ಒಂದು ಕುಟುಂಬವು ಗೊಂದಲದಲ್ಲಿತ್ತು. ಆಗ ಅವರು ಸಹ ಮಗುವನ್ನು ನೈಲ್ ನದಿಯಲ್ಲಿ ಬೀಡೋಣ ಎಂದುಕೊಂಡು ಆ ಮಗುವನ್ನು ಒಂದು ಪೆಟ್ಟೀಗೆಯಲ್ಲಿ ಹಾಕಿ ತೇಲಿಬಿಟ್ಟರು.



ಚಿಕ್ಕ ಪೆಟ್ಟಿಗೆಯು ದೋಣಿಯ ರೀತಿಯಲ್ಲಿ ನೀರಿನಲ್ಲಿ ತೇಲುತ್ತಾ ಅತ್ಯಮೂಲ್ಯವಾದದನ್ನು ಸರಕುಗಳಂತೆ ಸಾಗಿಸುತ್ತಾ ಮುಂದೆ ತೇಲುತ್ತಿತ್ತು.



ಅದರಲ್ಲಿದ್ದ ಚಿಕ್ಕ ಮಗುವಿಗೆ ಏನಾಗಬಹುದು?



ಸ್ವಲ್ಪ ದೂರದಿಂದ ಮಗುವಿನ ಅಕ್ಕ ಅಮೂಲ್ಯವಾದ ಪೆಟ್ಟಿಗೆಯನ್ನು ನೋಡುತ್ತಿದ್ದಳು. ಅದು ಅಲೆಗಳೊಂದಿಗೆ ತೇಲುತ್ತಾ ನಿಧಾನವಗಿ ಮುಂದೆ ಸಾಗಿತ್ತು.





ಅದೇ ಸಮಯಕ್ಕೆ ಫರೋಹನನ
ಕುಮಾರ್ತೆಯು ತನ್ನ ಗೆಳತಿಯರ
ಸಂಗಡ ನದಿಗೆ ಸ್ನಾನಕ್ಕೆ ಬಂದಳು.

ಆಗ ಪೆಟ್ಟಿಗೆಯನ್ನು ಬಚ್ಚಿಡಲು ಅಸಾಧ್ಯವಾಯಿತು. ಅವರು ಆ ಪೆಟ್ಟಿಗೆಯನ್ನು ಗಮನಿಸದೆ ಹೋಗಬಹುದಾ?



ಓ ಅಲ್ಲಿ ಪೆಟ್ಟಿಗೆ! ಅದರ ಒಳಗಡೆ ಏನಿದೆ ಎಂದು ಆಶ್ಚರ್ಯವಾಗಿ ಫರೋಹನನ ಕುಮಾರ್ತೆಯು ತನ್ನ ಗೆಳತಿಯರಿಗೆ ಆ ಪೆಟ್ಟಿಗೆಯನ್ನು ತಗೆದುಕೊಂಡು ಬಾ ಎಂದಳು.

ಆ ಪೆಟ್ಟಿಗೆಯನ್ನು ತೆರೆಯಲು ಮಗುವು ಅಳಲು ಆರಂಭಿಸಿತು. ಇದು ಎಬ್ರೀಯರ ಮಗು ಎಂದು ಕುಮಾರ್ತೆಯು ಉದ್ಗರಿಸಿದಳು.



"ಓ ಚಿಕ್ಕ ಕಂದ ನೀನೆಷ್ಟು ಅಂದವಾಗಿದಿಯಾ"? ಎಂದು ಫರೋಹನನ ಕುಮಾರ್ತೆಯು ಅನೇಕ ದೊಡ್ಡವರು ಮಾತನಾಡಿಸುವ ಹಾಗೆ ಮಗುವನ್ನು



ಮಾತನಾಡಿಸಿರಬಹುದು.

ತನ್ನ ಐಗುಪ್ತ ಭಾಷೇಯಲ್ಲಿ "ಕುಚಿ ಕುಚಿ" ಎಂದು ಈ ರಿತಿಯಲ್ಲಿಯೂ ಸಹ ಮಾತನಾಡಿಸಿರಬಹುದು.



ದೇವರು ಆ ಮಗುವಿನ ಅಕ್ಕಳಿಗೆ ವಿಷೇಶವಾದ ಜ್ಞಾನವನ್ನು ಕೊಟ್ಟಿರಬಹುದು. ಅವಳು ಬೇಗನೆ ಫರೋಹನನ ಕುಮಾರ್ತೆಯು ಹತ್ತಿರ ಓಡಿ ಹೋದಳು.

"ನಾನು ಈ ಮಗುವನ್ನು ನೋಡಿಕೊಳ್ಳಲು ನಿನಗಾಗಿ ಒಬ್ಬಳು ದಾದಿನಿಯನ್ನು ಕರೆದುಕೊಡು ಬರಲೆ?"



ಎಂದು ಕೇಳಿದಾಗ ಅವಳು "ಕರೆದುಕೊಂಡು ಬಾ" ಅಂದು ಉತ್ತರಕೊಟ್ಟಳು. ಆ ಹುಡುಗಿಯು ಕರೆದುಕೋಂಡು ಬರಲು ಏಕೆ ಓಡಿದಳು?



ಅಮ್ಮ ಬೇಗ ಬಾ! ಬೇಗ! ಒಂದು ವೇಳೆ ಆ ಹುಡುಗಿಗೆ ಎಲ್ಲವನ್ನು ವಿವರಿಸಲು ಸಮಯ ಇಲ್ಲದೆ ಇರಬಹುದು.

ಇಬ್ಬರು ನದಿಯ
ಕಡೆಗೆ ಒಡಿ
ಬಂದರು.



ನದಿಯ ಹತ್ತಿರ, ಫರೋಹನನ ಕುಮಾರ್ತೆಯು ಮಗುವನ್ನು ಕೈಯಲ್ಲಿ ಇಟ್ಟುಕೊಂಡು "ನನಗೋಸ್ಕರ ಸಾಕಮ್ಮಾ ನಾನೇ ನಿನಗೆ ಸಂಬಳ ಕೊಡುವೇನು" ಎಂದು ಹೇಳಿ ಮಗುವಿಗೆ "ಮೋಶೆ" ಎಂದು ಹೆಸರಿಟ್ಟಳು.



ಇವನನ್ನು ನೀರಿನೊಳಗಿಂದ ಎಳೆದಿದ್ದರಿಂದ ಐಗುಪ್ತರಿಗೆ ನೀರಿನ ಮಗನಾದನು.



ಮೋಶೆ ತನ್ನ ತಂದೆ ತಾಯಿಗಳ ಮನೆಗೆ ಹಿಂದಿರುಗಲು ಅವರು ಅವನಿಗೆ ದೇವರನ್ನು ಮತ್ತು ಇಬ್ರಿಯ ಜನರನ್ನು ಪ್ರೀತಿಸುವುದನ್ನು ಹೇಳಿ ಕೊಟ್ಟರು.



ಅವನು ಫರೋಹನ ಕುಮಾರ್ತೆಯರೊಂದಿಗೆ
ಅರಮನೆಯಲ್ಲಿ ವಾಸಮಾಡುದಕ್ಕೆ
ಸಿದ್ಧನಾಗಿದ್ದಾನೆ. ದೇವರು ತಾನೆ ಮೋಶೆಯ
ಜೀವವನ್ನು ಉಳಿಸಿ
ಮಗುವಾಗಿದ್ದ
ಮೋಶೆಗೆ
ಉಜ್ವಲವಾದ
ಭವಿಷ್ಯವನ್ನು
ರೂಪಿಸಿದ್ದನು.



# ನದಿಯಿಂದ ರಾಜಕುಮಾರನು

ದೇವರ ವಾಕ್ಯವಾದ ಬೈಬಲ್‌ನಿಂದ ಆರಿಸಿದ ಕಥೆ

ಸಿಕ್ಕುವ ಭಾಗ

ವಿಮೋಚನಕಾಂಡ 2

“ನಿನ್ನ ವಾಕ್ಯವಿವರಣೆಯಿಂದ ಜ್ಞಾನೋದಯವಾಗುವದು.”
ಕೀರ್ತನೆ 119:130

ಮುಕ್ತಾಯ

ಅದ್ಭುತನಾದ ದೇವರು ನಮ್ಮನ್ನು ಉಂಟು ಮಾಡಿರುವವನೆಂದು ಮತ್ತು ನಾವು ಆತನನ್ನು ಕಂಡುಕೊಳ್ಳಬೇಕೆಂದು ದೇವರು ಇಷ್ಟಪಡುತ್ತಾನೆಂದು ಈ ಬೈಬಲ್ ಕಥೆಯು ತಿಳಿಸುತ್ತದೆ.

ನಾವು ಕೆಟ್ಟ ಕೆಲಸಗಳನ್ನು ಮಾಡಿರುವದು ದೇವರಿಗೆ ತಿಳಿದಿರುತ್ತದೆ. ಈ ಕೆಟ್ಟ ಕೆಲಸಗಳನ್ನು ದೇವರು ಪಾಪವೆಂದು ಕರೆಯುತ್ತಾನೆ. ಪಾಪದ ಶಿಕ್ಷೆಯು ಮರಣವಾಗಿದೆ. ಆದರೆ ನಮ್ಮ ಪಾಪದ ಶಿಕ್ಷೆಯನ್ನು ತನ್ನ ಮೇಲೆ ಹೊತ್ತುಕೊಂಡು ಶಿಲುಬೆಯ ಮೇಲೆ ಪ್ರಾಣ ಕೊಡಲು ದೇವರು ತನ್ನ ಒಬ್ಬನೇ ಮಗನಾದ ಯೇಸುಕ್ರಿಸ್ತನನ್ನು ಈ ಲೋಕಕ್ಕೆ ಕಳುಹಿಸಿಕೊಟ್ಟನು. ಯೇಸುಕ್ರಿಸ್ತನು ಸತ್ತವರೊಳಗಿಂದ ತಿರುಗಿ ಎದ್ದು ಬಂದು ಪರಲೋಕಕ್ಕೆ ಏರಿಹೋಗಿದ್ದಾನೆ. ನಿನ್ನ ಪಾಪದ ಶಿಕ್ಷೆಯನ್ನು ಯೇಸುಕ್ರಿಸ್ತನು ತೀರಿಸಿದ್ದಾನೆ. ಆತನು ನಿನ್ನ ಪಾಪಗಳನ್ನು ಕ್ಷಮಿಸುತ್ತಾನೆ. ಆದರೆ ನಿನ್ನ ಪಾಪಗಳನ್ನು ಕ್ಷಮಿಸಬೇಕೆಂದು ನೀನು ಆತನಿಗೆ ಕೇಳಿಕೊಳ್ಳಬೇಕು. ಆತನು ಖಂಡಿತವಾಗಿ ನಿನ್ನ ಪಾಪಗಳನ್ನು ಕ್ಷಮಿಸುವವನು ಮತ್ತು ಈಗಲೇ ನಿನ್ನ ಹೃದಯದೊಳಗೆ ಬಂದು ವಾಸಿಸಬಲ್ಲನು! ನೀನು ಆತನೊಂದಿಗೆ ಯಾವಾಗಲೂ ಜೀವಿಸುವಿ.

ನೀನು ಈ ಸತ್ಯವನ್ನು
ನಂಬುವದಾದರೆ, ದೇವರಿಗೆ ಈ ಮಾತುಗಳನ್ನು ಹೇಳು:
ಕರ್ತನಾದ ಯೇಸುವೇ, ನೀನು ದೇವರು ಆಗಿರುವಿ ಎಂದು ಮತ್ತು ನನ್ನ
ಪಾಪಕ್ಕಾಗಿ ನಿನ್ನ ಪ್ರಾಣವನ್ನು ಕೊಡಲು ಮನುಷ್ಯನಾಗಿ ಬಂದಿರುವಿ
ಎಂದು ನಂಬುತ್ತೇನೆ. ಈಗ ನೀನು ಸತ್ತವರೊಳಗಿಂದ ಎದ್ದು ಬಂದು
ಯಾವಾಗಲೂ ಜೀವಿಸುವವನಾಗಿರುವಿ, ನನ್ನ ಪಾಪಗಳನ್ನು ದಯವಿಟ್ಟು
ಕ್ಷಮಿಸಿ ನನ್ನ ಹೃದಯದೊಳಗೆ ಬಂದು ವಾಸಿಸು. ಹೀಗೆ ಹೊಸ
ಜೀವವನ್ನು ಪಡೆದುಕೊಂಡು ಒಂದು ದಿನ ನಾನು ನಿನ್ನ ಬಳಿಗೆ ಬಂದು
ನಿನ್ನೊಂದಿಗೆ ಯಾವಾಗಲೂ ಇರುವೆನು. ನಿನಗೆ ವಿಧೇಯನಾಗುವದಕ್ಕೆ
ಮತ್ತು  ನಿನ್ನ ಮಗನಾಗಿ ಜೀವಿಸುವದಕ್ಕೆ ನನಗೆ ಸಹಾಯಮಾಡು.
ಆಮೆನ್.

ನೀನು ಪ್ರತಿದಿನವೂ ಬೈಬಲ್ ಓದು ಮತ್ತು ಪ್ರಾರ್ಥನೆಯಲ್ಲಿ
ದೇವರೊಂದಿಗೆ ಮಾತಾಡು!
ಯೋಹಾನ 3:16